ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಫ್ಜಲ್‌ಪುರದಲ್ಲಿ ಕೊಟ್ಟಿದ್ದಾರೆ. ಅದೇ ರೀತಿ ಇಲ್ಲಿಯೂ ಕೊಡುತ್ತೀರಾ ಏನು ಎಂದು ಕೇಳುತ್ತಿದ್ದಾರೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಜನರು ಸತ್ತಾಗ ಪರಿಹಾರ ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು:- ತಾವು ಯಾವ ವಿಷಯದ ಬಗ್ಗೆ ಪ್ರಸ್ತಾಪ ಮಾಡಬೇಕು ಅದು ಮಾಡಿ, ನಂತರ ವಿಚಾರ ಮಾಡೋಣ.

(ಐ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿರತೆ ಮತ್ತು ಆನೆಗಳ ಹಾವಳಿ.

+ ಶ್ರೀ ಸಿ.ಆರ್. ಸಗೀರ್ ಅಹಮದ್:- ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿರತೆ ಮತ್ತು ಆನೆಗಳ ಹಾವಳಿಯಿಂದ ಇಲ್ಲಿಯವರೆಗೆ 15 ಜನ ಮೃತಪಟ್ಟಿದ್ದಾರೆ.

ಉಪಾಧ್ಯಕ್ಷರು:- ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಬೇಕು. ಬೇಡಿಕೆಗಳ ಮೇಲೆ ಸಚಿವರು ಉತ್ತರಿಸಬೇಕಾಗಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಈ ಪ್ರಶ್ನೆಗಾಗಿ ನಾನು ಸದನ ಪ್ರಾರಂಭವಾದಾಗಿನಿಂದ ಇವತ್ತಿನವರೆಗೆ ಕಾದಿದ್ದೇನೆ. ದಯವಿಟ್ಟು ಮಧ್ಯದಲ್ಲಿ ನಿಲ್ಲಿಸಿ ಎಂದರೆ ಆಗುವುದಿಲ್ಲ. ಚಿರತೆ ಮತ್ತು ಆನೆ ಹಾವಳಿಯಿಂದ ಅದೂ ಬಯಲುಸೀಮೆ ಪ್ರದೇಶದಲ್ಲಿ ಅಮಾಯಕರು ಹೆಚ್ಚು ಕಡಿಮೆ 15 ಜನರು ಮೃತಪಟ್ಟಿದ್ದಾರೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದು ಬಹಳ ಗಂಭೀರವಾದ ಪ್ರಶ್ನೆ. ನಾನು ಮಲೆನಾಡಿನಲ್ಲಿ ವಾಸವಾಗಿದ್ದು, ಈ ಚಿರತೆ ಹುಲಿ ಆನೆ ಎಲ್ಲ ಬಯಲು ಸೀಮೆ ಕಡೆ ಬರುತ್ತಿವೆ. ಈ ವಿಷಯ ಸರ್ಕಾರದ ಗಮನಕ್ಕೆ ಬಂದರೂ ಸಹ ಇಲ್ಲಿಯವರೆಗೆ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಇವರು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆಂದರೆ ಚಿರತೆ ಸಾಯಿಸುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಗುಂಡಿಕ್ಕಿ ಹೆಚ್ಚು ಕಡಿಮೆ 8 ಚಿರತೆಗಳನ್ನು ಸಾಯಿಸಿದ್ದಾರೆ. ಇದು ಪರಿಸರದ ವಿರುದ್ಧವಾಗಿ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮ. ತಮ್ಮ ಗಮನಕ್ಕೆ ತರುವುದಾದರೆ, ಆನೆ ತುಳಿತಕ್ಕೆ ಈಡಾಗಿ ಜನರು ಸತ್ತಿದ್ದಾರೆ. ಚಿರತೆಗೆ ಈಡಾಗಿ 12 ಜನರು ಮೃತಪಟ್ಟಿದ್ದಾರೆ. ಇದಕ್ಕೆ ನೀಡಿರುವ ಪರಿಹಾರ ಕೇವಲ ರೂ. 10,000-00 ಇದು ಯಾವ ನ್ಯಾಯ ಎಂದು ತಾವು ಹೇಳಬೇಕು. ಒಂದು ಕೋಮು ಗಲಭೆ ಆದಂಥ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯ ಸಾವು ಆದಾಗ ಸರ್ಕಾರ ಒಂದು ಲಕ್ಷ ರೂಪಾಯಿ ಕೊಡುವ ಘೋಷಣೆ ಮಾಡುತ್ತಾರೆ. ಇವತ್ತು ಪ್ರಕೃತಿ ವಿಕೋಪದ ಕಾರಣಕ್ಕೆ ಸತ್ತಂಥ ಜನರಿಗೆ ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡುತ್ತದೆ. ಒಂದು ಅಪಘಾತದಲ್ಲಿ ಸತ್ತವರಿಗೆ ಸರ್ಕಾರದ ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ಚಾಲಕರಾಗಲಿ, ಕಂಡಕ್ಟರ್ ಆಗಲಿ ಅವರಿಗೆ 50 ಸಾವಿರ ರೂಪಾಯಿ ಕೊಡುವ ಘೋಷಣೆ ಮಾಡಿದ್ದಾರೆ. ಅಮಾಯಕರ ಮೇಲೆ ಚಿರತೆ ಹಾವಳಿ ಮಾಡಿ 12 ಜನರನ್ನು ಸಾಯಿಸಿರುವಾಗ ಇವರು ನೀಡಿರುವ ಪರಿಹಾರ ಎಷ್ಟು ಎಂದು ಮುಖ್ಯವಾಗಿ ಸರ್ಕಾರ ಆಲೋಚನೆ ಮಾಡಬೇಕಾಗಿತ್ತು. ಇದು ಪ್ರಾಯಕ್ಕೆ ಬಂದಂಥ, ಮನೆಯ ಕುಟುಂಬದ ಜವಾಬ್ದಾರಿ ಹೊತ್ತಂಥ ಯುವಕ ಯುವತಿಯರು ಈ ಘಟನೆಗಳಲ್ಲಿ ಸತ್ತಿದ್ದಾರೆ. ಅದರ ಜೊತೆಗೆ

ರೈತರು, ಪರಿಶಿಷ್ಟ ಜಾತಿಗೆ ಸೇರಿರುವಂಥ ವ್ಯಕ್ತಿಗಳು, ಇವತ್ತು ಮನೆಯಲ್ಲಿ ಉಣ್ಣುವುದಕ್ಕೆ ಅವಕಾಶ ಇಲ್ಲದವರು, ಜಮೀನು ಕೆಲಸಕ್ಕೆ ಹೋಗುವವರು. . . ?

ಉಪಾಧ್ಯಕ್ಷರು:- ಭಾಷಣ ಮಾಡುವುದಕ್ಕೆ ಅವಕಾಶ ಇಲ್ಲ. ಎರಡು ನಿಮಿಷದಲ್ಲಿ ಮುಗಿಸಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಇನ್ನೂ ಎರಡು ನಿಮಿಷ ಆಗಿಲ್ಲ. ತಾವು ಬೇಕಾದರೆ ಗಡಿಯಾರ ನೋಡಿ, ನಾನು ಮುಗಿಸುತ್ತೇನೆ. ರೈತರ ಕುಟುಂಬಕ್ಕೆ ಸೇರಿದವರು, ಪರಿಶಿಷ್ಟ ವರ್ಗಕ್ಕೆ ಸೇರಿದ ಜನರಿಗೆ ಸರ್ಕಾರ ಕೇವಲ ಹತ್ತು ಸಾವಿರ ರೂಪಾಯಿ ಪರಿಹಾರ ನೀಡುತ್ತೇವೆಂದರೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಈ ರೈತರ ಮಕ್ಕಳು ಏನು ಸತ್ತಿದ್ದಾರೆ ಇದರ ಬಗ್ಗೆ ಪರಿಹಾರ ಹೆಚ್ಚಿಸಬೇಕು. ಎರಡನೆಯದಾಗಿ, ನಮ್ಮ ಜಿಲ್ಲೆಯಲ್ಲಿ ಬಹಳ ದೊಡ್ಡ ಸಮಸ್ಯೆ ಇದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದವರು ಸೇರಿಕೊಂಡು ಭದ್ರ ಅಭಯಾರಣ್ಯ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. 736 ಕುಟುಂಬಗಳು ಇದರಲ್ಲಿ ಜೀವನ ನಡೆಸುತ್ತಿದೆ. ಈ ವ್ಯಾಪ್ತಿಯಲ್ಲಿ 16 ಹಳ್ಳಿಗಳು ಬರುತ್ತವೆ. ಜನಸಂಖ್ಯೆ 4 ಸಾವಿರ ಮೀರಿದೆ.

ಉಪಾಧ್ಯಕ್ಷರು:- ಮೂಲ ಪ್ರಶ್ನೆ ಏನಿದೆ ಹೇಳಿ, ಶೂನ್ಯ ವೇಳೆಯಲ್ಲಿ ಕಥೆ ಹೇಳುವುದಕ್ಕಾಗುವುದಿಲ್ಲ. ನೇರವಾಗಿ ಏನು ಪರಿಹಾರ ಬೇಕು ಅದನ್ನು ಕೇಳಿ.

3.40 ಪಿಎಂ

ಶ್ರೀ ಸಿ.ಆರ್. ಸಗೀರ್ ಅಹಮದ್:- ಹುಲಿ ಎಲ್ಲಿರಬೇಕು ಅಧ್ಯಕ್ಷರೇ? ಚಿರತೆಯಾಗಲೀ ಹುಲಿಯಾಗಲೀ ಆನೆಯಾಗಲೀ ಎಲ್ಲಿರಬೇಕು? ಕಾಡಿನಲ್ಲಿರಬೇಕು. ಬೆಂಗಳೂರಿಗೆ ಏತಕ್ಕೆ ಬರುತ್ತದೆ, ಇವತ್ತು? ಕಡೂರಿನಂಥ ದೊಡ್ಡ ಪಟ್ಟಣಕ್ಕೆ ಏತಕ್ಕೆ ಬರುತ್ತದೆ? ಚಿಕ್ಕಮಗಳೂರಿನಂಥ ದೊಡ್ಡ ಪಟ್ಟಣಕ್ಕೆ ಏತಕ್ಕೆ ಬರುತ್ತದೆ ಹುಲಿ ಚಿರತೆ ಆನೆ? ಇದು ಅರಣ್ಯ ಇಲಾಖೆಯವರ ಬೇಜವಾಬ್ದಾರಿ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಅರಣ್ಯ ಇಲಾಖೆಯಿಂದ ಹಮ್ಮಿಕೊಂಡಿರುವಂಥ ಭದ್ರಾ ಅಭಯಾರಣ್ಯ ಯೋಜನೆಯನ್ನು ಇವತ್ತಿನವರೆಗೆ ಇವರ ಕೈಯಲ್ಲಿ ಪೂರೈಸುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಅಂದಾಜು ವೆಚ್ಚ ಹನ್ನೆರಡೂವರೆ ಕೋಟಿ ರೂಪಾಯಿ. ಕಾಡಿನಲ್ಲಿ ಇರಬೇಕಾದಂಥ ಈ ಕಾಡು ಪ್ರಾಣಿಗಳು ವನ್ಯಜೀವಿಗಳು . . .

ಶ್ರೀ ವಾಟಾಳ್ ನಾಗರಾಜ್:- ಒಂದು ನಿಮಿಷ.

ಉಪಾಧ್ಯಕ್ಷರು:- ನೀವು ಏತಕ್ಕೆ ಡಿಸ್ಟರ್ಬ್ ಮಾಡುತ್ತೀರಿ ಅವರನ್ನು? ಅವರು ಅವರನ್ನು ಕೇಳುತ್ತಾರೆ, ಅವರು ಹೇಳುತ್ತಾರೆ. ತಾವು ಬೇರೆ ಪ್ರಸ್ತಾಪ ಮಾಡಿ ದಯಮಾಡಿ. ಈಗ ಅವರು ಮಾತನಾಡಲಿ. ತಮ್ಮನ್ನು ಕರೆದಿಲ್ಲ. ತಾವು ದಯವಿಟ್ಟು ಮಾತನಾಡಬೇಡಿ.

ಶ್ರೀ ವಾಟಾಳ್ ನಾಗರಾಜ್:- ಈಗ ಅವರು ಬೆಂಗಳೂರಿಗೆ ಬಂದಿದೆ ಎಂದು ಹೇಳಿದರು. ಬೆಂಗಳೂರಿಗೆ ಯಾವಾಗ ಬಂದಿತ್ತು ಚಿರತೆ ಎಂದು ಕೇಳುತ್ತಿದ್ದೇನೆ ನಾನು. ನಮಗೆ ಭಯ ಭೀತಿ ಆಗಿದೆ.

ನಾಳೆ ವಿಧಾನಸೌಧಕ್ಕೆ ಬರುವುದು, ಶಾಸನಸಭೆಗೆ ನುಗ್ಗುವುದು ಇದೆಲ್ಲಾ ಆಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ:- ವಾಟಾಳ್ ಅವರೇ, ಇಲ್ಲಿ ಸರ್ಕಸ್ ಬಂದಿತ್ತಲ್ಲ ಆಗ ಹುಲಿ, ಚಿರತೆ, ಆನೆ ಎಲ್ಲ ಬಂದಿತ್ತು. ಅದನ್ನು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಬೆಂಗಳೂರಿಗೆ ಬಂದಿತ್ತು ಚಿರತೆ ಎಂದು ಹೇಳುತ್ತಾರಲ್ಲ ಎಲ್ಲಿ ಬೆಂಗಳೂರಿಗೆ ಬಂದಿತ್ತು? ಸರ್ಕಸ್ ಹುಲಿ ನಾವು ನೋಡಿರುವುದು. ಸರ್ಕಸ್ ಚಿರತೆ ಬೆಂಗಳೂರಿಗೆ ಬಂದಿದ್ದನ್ನು ನಾವು ನೋಡಿದ್ದೇವೆ. ಆದರೆ ಬೆಂಗಳೂರಿಗೆ ಹುಲಿ ಚಿರತೆ ಬಂದುಬಿಡ್ತು ಎಂದರೆ ಪರಿಸ್ಥಿತಿ ಏನು?

ಶ್ರೀ ಸಿ.ಆರ್. ಸಗೀರ್ ಅಹಮದ್:- ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರಿಗೆ ಬರುವಂಥ ದಿನಗಳು ಏನೂ ದೂರ ಇಲ್ಲ, ಬರುತ್ತದೆ. ಆದರೆ ವಾಟಾಳ್ ನಾಗರಾಜ್ ಸಾಹೇಬರು ಜೋಪಾನವಾಗಿ ಇರಬೇಕು ಅಷ್ಟೆ. ಇಲ್ಲ ಅಂದರೆ ಅದು ಕಚ್ಚಿಬಿಡುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಇಲ್ಲ, ಇಲ್ಲ. ಹುಲಿ ಚಿರತೆ ಆಡಿಸುವುದು ನನಗೆ ಗೊತ್ತಿದೆ. ನೀವು ಹೆದರಿ ಇಲ್ಲಿ ಪ್ರಶ್ನೆ ಎತ್ತುತ್ತಾ ಇದ್ದೀರಿ. ಆ ಹುಲಿ ಚಿರತೆಗೆ ಹೆದರಿಕೊಂಡು ಇವರು ಇಲ್ಲಿ ಪ್ರಶ್ನೆ ಎತ್ತುತ್ತಿದ್ದಾರೆ. ನೋಡಿ ಹೇಗಿದೆ ಪರಿಸ್ಥಿತಿ?

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ಆದ್ದರಿಂದ ನಾನು ಸರ್ಕಾರದವರಿಗೆ ಏನು ಕೇಳುತ್ತೇನೆ ಅಂದರೆ ನಾವು ಜಿಲ್ಲಾ ಮಟ್ಟದಲ್ಲೂ ಮಾತನಾಡಿದ್ದೇವೆ. ನಾವು ಚಿರತೆ ಹಿಡಿಯುವುದಕ್ಕಾಗಿ ಬೋನ್‌ಗಳನ್ನು ಇಟ್ಟಿದ್ದೇವೆ ಎಂದು ನನಗೆ ಉತ್ತರ ಕೊಟ್ಟಿದ್ದಾರೆ. ಹಾಗಾದರೆ ಹುಲಿ ನೇರವಾಗಿ ಆ ಬೋನ್‌ಗಳಿಗೆ ಬರುತ್ತದಾ ಅಂತ? ಅಮಾಯಕರಿಗೆ ಏನು ಇವತ್ತು ವನ್ಯಜೀವಿಗಳಿಂದ ಅಪಾಯ ಉಂಟಾಗಿದೆ ಇದನ್ನು ನಿಲ್ಲಿಸುವಂಥ ಕಾರ್ಯಕ್ರಮವನ್ನು ಅರಣ್ಯ ಮಂತ್ರಿಗಳು ಮತ್ತು ಸರ್ಕಾರ ಹಾಕಿಕೊಳ್ಳಬೇಕು. ಅಮಾಯಕ ಜನ ಏನು ಸತ್ತಿದ್ದಾರೆ ಅವರಿಗೆ ಸಂಬಂಧಪಟ್ಟಂಥ ಕುಟುಂಬ ವರ್ಗದವರಿಗೆ ಅದರಲ್ಲೂ ವಿಶೇಷವಾಗಿ ಶೋಷಿತ ವರ್ಗದ ಜನ ಸತ್ತಿರುವುದರಿಂದ ಅವರಿಗೆ ಪರಿಹಾರ ಹೆಚ್ಚಾಗಿ ಒದಗಿಸಿಕೊಡುವಂತೆ ಸರ್ಕಾರಕ್ಕೆ ಒತ್ತಾಯಿಸುತ್ತಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಅಧ್ಯಕ್ಷರೆ, ಈ ಶೂನ್ಯ ವೇಳೆಯಲ್ಲಿ ಕೇಳಿದಂಥ ಪ್ರಶ್ನೆಯನ್ನು, ಶೂನ್ಯ ವೇಳೆ ಹೋಗಿ ದಿನವೇ ಆಗಿಬಿಟ್ಟಿದೆ; ದಿನ ಆಗಿದೆಯಲ್ಲ ಸಾರ್ ವೇಳೆ ಹೋಗಿ.

ಶ್ರೀ ವಾಟಾಳ್ ನಾಗರಾಜ್:- ಹುಲಿ ಚಿರತೆ ಪ್ರಶ್ನೆ ಬಂದಾಗ ದಿನವೆಲ್ಲಾ ಚರ್ಚೆ ಮಾಡಬೇಕಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ನಾನಂತೂ ಪ್ರವೇಶ ಮಾಡುವುದಕ್ಕೆ ತಯಾರಿಲ್ಲ. ತಾವೇ ಶೂನ್ಯ ವೇಳೆ ಎಂದು ನನಗೆ ಅನುಮತಿ

ಕೊಟ್ಟು ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಮಂತ್ರಿಗಳು ಹೀಗೆ ಹೇಳಿದರೆ ನಾನು ಏನು ಹೇಳಲಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಬೀದರ್‌ನವರಿಗೆ ಕನ್ನಡ ಸರಿಯಾಗಿ ಬರುವುದಿಲ್ಲ. ವೇಳೆ, ದಿನ ಹೆಚ್ಚುಕಡಿಮೆಯಾಗುತ್ತಿದೆ. ತಾವು ತಿಳಿದುಕೊಳ್ಳಿ. ತಾವು ಈಗ ಚಿರತೆ ಬಗ್ಗೆ ಹೇಳಿದ್ದೀರಿ. ಅಂಕಿಅಂಶ ಬೇಕಾದರೆ ನಾನು ತರಿಸಿಕೊಳ್ಳಬೇಕಾಗುತ್ತದೆ. ಅಲ್ಲಿ ಆಗಿದ್ದು ನಿಜ. ಸುಳ್ಳೇನೂ ಇಲ್ಲ. ಅದರ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತಿದ್ದೇವೆ. 8 ಜನ ಸತ್ತಿದ್ದಾರೆ ಎಂದು ನನ್ನ ಗಮನಕ್ಕೆ ಬಂದಿದೆ. ಅದರಲ್ಲಿ ಸಣ್ಣ ಹುಡುಗರು ಮತ್ತು ಮುದುಕರು ಇದ್ದಾರೆ. ಇಂಥದ್ದೇ ಅದು ತಿನ್ನುತ್ತಾ ಇದೆ. ಅದಲ್ಲದೆ ಮೊನ್ನೆ ಊರಿನವರೆಲ್ಲಾ ಸೇರಿ ಒಂದು ಹುಲಿ ಹಿಡಿದು ಹೊಡೆದುಬಿಟ್ಟಿದ್ದಾರೆ. ಅದನ್ನು ಆಪರೇಷನ್ ಮಾಡಿ ತೆಗೆದಾಗ ಅದರ ಹೊಟ್ಟೆಯಲ್ಲಿ ಗುರ್ದೆ ಗಿರ್ದೆ ಏನೇನೋ ಬಂದಿದೆ ಅಂತ ಅದು ಮಾನಿಟರ್ ಎಂದು ಹೇಳಿ ಗುರುತು ಹಿಡಿದಿದ್ದಾರೆ. ಅದನ್ನು ಹೊಡೆಯುವುದಕ್ಕೆ ಕಾರ್ಯಕ್ರಮ ಏತಕ್ಕೆ ಹಾಕಿಕೊಂಡಿದ್ದೇವೆ ಅಂದರೆ ಅದು ತಿಂದುತಿಂದು ಅದಕ್ಕೆ ಮನುಷ್ಯನ ರಕ್ತದ ರುಚಿ ಹತ್ತಿದೆ. ಅಂಥದ್ದಕ್ಕೆ ಹೊಡೆಯಲೇ ಬೇಕಾಗುತ್ತದೆ. ಅಂಥದ್ದು ಇಡುವುದಕ್ಕಾಗುವುದಿಲ್ಲ. ಅಂಥದ್ದು ನಾಲ್ಕೈದು ಹೊಡೆದಿದ್ದಾರೆ. ಇನ್ನೂ ಹೊಡೆಯಬೇಕಾಗಿದೆ. ಸಂಪೂರ್ಣವಾದ ಅಂಕಿಅಂಶ ಬೇಕಾದರೆ ನಾನು ನಿಮಗೆ ತರಿಸಿ ಕೊಡುತ್ತೇನೆ. ಇವತ್ತು ನನ್ನ ಹತ್ತಿರ ಇರತಕ್ಕ ಮಾಹಿತಿ ಇಷ್ಟೆ. ಇದು ಮೊದಲು ನಿಮಗೆ ಲಿಖಿತ ಮೂಲಕ ಉತ್ತರವೂ ಬಂದಿದೆ. ನಿಮಗೆ ಇದರ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕು ಅಂದರೂ ನಾನು ತರಿಸಿಕೊಡುತ್ತೇನೆ. ಅದರ ಬಗ್ಗೆ ಚಿಂತೆ ಇಲ್ಲ. ನಾಳೆ ಬೇಕಾದರೂ ಕೊಡುತ್ತೇನೆ ಪರ್ಸನಲ್ಲಾಗಿ ಬಂದರೆ. ಪರಿಹಾರ ಕೇಳಿದ್ದೀರಿ, ಪರಿಹಾರ ಕೊಡುವುದಕ್ಕೆ 10-10 ಸಾವಿರ ರೂಪಾಯಿ ಕೊಡುವುದಕ್ಕೆ ಲೋಕಲ್ ಆಫೀಸರ್ಸ್‌ಗೆ ಅಧಿಕಾರ ಕೊಟ್ಟಿದ್ದೇವೆ. 25 ಸಾವಿರ ರೂಪಾಯಿ ಒಟ್ಟು ಕೊಡುತ್ತೇವೆ. ಇನ್ನೂ 15 ಸಾವಿರ ಬಿಡುಗಡೆ ಮಾಡುವುದಕ್ಕೆ ನಾನು ಹೇಳಿಬಿಟ್ಟಿದ್ದೇನೆ. 25 ಸಾವಿರಕ್ಕಿಂತ ಮೇಲೆ ಕೊಡುವುದಕ್ಕೆ ಬರುವುದಿಲ್ಲ. ಕಾನೂನು ಆ ಪ್ರಕಾರ ಮಾಡಿದ್ದಿದೆ. ಆದರಲ್ಲಿ ಇನ್ನೂ ಒಂದು ವಿಚಾರವನ್ನು ನಾವು ಮಾಡುತ್ತಿದ್ದೇವೆ. ಅದನ್ನೂ ಮೊದಲೇ ಹೇಳುತ್ತೇನೆ. ನಿಜ ನೀವು ಹೇಳುವುದು. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪರಿಹಾರ ಕೊಡತಕ್ಕ ವ್ಯವಸ್ಥೆಯನ್ನು ನಾವು ಏನಾದರೂ ಮಾಡಬೇಕು ಎನ್ನುವುದು ಪರಿಶೀಲನೆಯಲ್ಲಿದೆ. ಅದನ್ನು ಆದಷ್ಟು ಮಟ್ಟಿಗೆ ಯಾವ ರೀತಿ ಮಾಡುವುದಕ್ಕೆ ಸಾಧ್ಯ ಇದೆ ಎನ್ನುವುದನ್ನು ಪರಿಶೀಲನೆ ಮಾಡುತ್ತೇವೆ. ಮತ್ತೊಂದೇನೆಂದರೆ ಈ ಜಾತಿ ಆ ಜಾತಿ ಅಂತ ಅಲ್ಲಿ ಇಲ್ಲ. ಯಾರು ಸಿಕ್ಕಿದರೂ ಅದು ತಿನ್ನುತ್ತದೆ. ಇಂಥ ಜಾತಿಯವರನ್ನೇ ತಿನ್ನಬೇಕು ಎಂದು ಸೆಲೆಕ್ಷನ್ ಇಲ್ಲ ಅದಕ್ಕೆ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಸನ್ಮಾನ್ಯ ಅಧ್ಯಕ್ಷರೆ . . .

ಉಪಾಧ್ಯಕ್ಷರು:- ಇಲ್ಲಿ ಪ್ರಶ್ನೆ ಕೇಳುವುದು ಉತ್ತರ ಕೇಳುವುದು ಅಂತ ಇಲ್ಲ. ಅವರು ಏನು ಹೇಳುತ್ತಾರೋ ಅದನ್ನು ಕೇಳಿ ತಾವು ಸುಮ್ಮನೆ ಕುಳಿತುಕೊಳ್ಳಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್:- ಅದಲ್ಲ ಸಾರ್. ಆ ಜಾತಿ ಈ ಜಾತಿ ಇಲ್ಲ ಎಂದು ಹೇಳಿದರು. ದನ ಕಾಯುವುದಕ್ಕೆ ಹೋಗಿದ್ದ ಆಮಾಯಕರ ಬಗ್ಗೆ ಚಿರತೆ ದಾಳಿ ಮಾಡಿದೆ. ರೈತರು ತಮ್ಮ ಜಮೀನಿಗೆ ಹೋಗುವಂಥ ಸಂದರ್ಭದಲ್ಲಿ ದಾಳಿ ಮಾಡಿದೆ.

ಉಪಾಧ್ಯಕ್ಷರು:- ನೀವು ಪದೇ ಪದೇ ಎದ್ದು ಈ ರೀತಿ ಹೇಳುವುದು ಸರಿಯಲ್ಲ ಇದು.

ಶ್ರೀ ಸಿ.ಆರ್. ಸಗೀರ್ ಅಹಮದ್:- ಅವರು ಶೋಷಿತ ವರ್ಗಕ್ಕೆ ಸೇರಿದ ವ್ಯಕ್ತಿಗಳು ಎಂದು ನಾನು ನೇರವಾಗಿ ಸರ್ಕಾರದ ಗಮನಕ್ಕೆ ತರುತ್ತೇನೆ.

ಉಪಾಧ್ಯಕ್ಷರು:- ಆಯಿತು. ತಾವು ಕುಳಿತುಕೊಳ್ಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಚಿರತೆಗಳು ಇಂಥ ಜಾತಿಯವರನ್ನೇ ಹಿಡಿಯುತ್ತದೆ ಎಂದು ನಾನು ಹೇಳಲಿಲ್ಲ. ಯಾರು ಆಮಾಯಕರ ಮೇಲೆ ದಾಳಿ ಮಾಡಿದೆ ಅವರೆಲ್ಲಾ ಶೋಷಿತ ವರ್ಗಕ್ಕೆ ಸೇರಿರುವಂಥ ಜನರು ಎಂದು ತಮ್ಮ ಮುಖಾಂತರ ಅವರ ಗಮನಕ್ಕೆ ತರುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಇಂಥದ್ದೇ ಎಂದು ಗುರುತಿಸಿ ಮಾಡುವುದಕ್ಕಾಗುವುದಿಲ್ಲ, ನಾನು ಇಷ್ಟೇ ಹೇಳಿದುದ್ದು. ಆದಷ್ಟು ಮಟ್ಟಿಗೆ ಅದೇನೇ ಇರಲಿ ಅದಕ್ಕೆ ಪರಿಹಾರವನ್ನು ಕೊಡುತ್ತೇವೆ. ಅದನ್ನು ಹೊಡೆಯುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಯಾವುದು ಒಳ್ಳೆಯದಿದೆ ಅದನ್ನು ಕಾಯುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಸಂಪೂರ್ಣವಾಗಿ ಅಧಿಕಾರಿಗಳಿಗೆ ಏನು ಹೇಳಬೇಕೋ ಅದನ್ನು ಹೇಳಿದ್ದೇನೆ. ಇನ್ನು ನಾವು ನೀವು ಡಿಸ್ಕಸ್ ಮಾಡೋಣ. ನನ್ನ ಹತ್ತಿರ ಬನ್ನಿ. ಇನ್ನೂ ತಾವು ಹೆಚ್ಚಿನ ಸಲಹೆ ಕೊಟ್ಟರೆ ಖಂಡಿತವಾಗಿ ಸ್ವಾಗತ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಆಮಾಯಕರನ್ನು ಕಚ್ಚಿದೆ ಎಂದು ಹೇಳಿದರೆ ಶಾಸಕರನ್ನು ಕಚ್ಚಿಬಿಟ್ಟರೆ ಗತಿ ಏನು? ಅದಕ್ಕೆ ಎಷ್ಟು ರೇಟು? ನನಗಿನ್ನೂ ಅರ್ಥವಾಗುತ್ತಿಲ್ಲ. ಯಾರನ್ನು ಬೇಕಾದರೂ ಕಚ್ಚುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ನಾನು ಅದಕ್ಕೇ ಹೇಳುತ್ತೇನೆ ಇಂಥವರು ಎಂದು ಗುರುತು ಹಿಡಿಯುವ ಪ್ರಶ್ನೆ ಇಲ್ಲ; ಅದು ಬೆಂಗಳೂರಿಗೆ ಬರುವ ಪ್ರಶ್ನೆ ಇಲ್ಲ.

ಉಪಾಧ್ಯಕ್ಷರು:- ನೀವು ಅಲ್ಲಿ ಹೋಗಬೇಡಿ, ಹೋದರೆ ಕಚ್ಚುತ್ತದೆ. ಅಲ್ಲಿ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್:- ಸಾರ್, ಪ್ರಾಮುಖ್ಯವಾದ ವಿಚಾರ ಅಂದರೆ . . .

ಉಪಾಧ್ಯಕ್ಷರು:- ಅಲ್ಲ, ನೀವು ಅಲ್ಲಿಗೆ ಹೋಗಬೇಡಿ, ಏತಕ್ಕೆ ಹೋಗುತ್ತೀರಿ ನೀವು?

ಶ್ರೀ ವಾಟಾಳ್ ನಾಗರಾಜ್:- ಸಾರ್, ಇದೇ ಸದನದಲ್ಲಿ ಎರಡು ಹೆಬ್ಬಾವು ಹಿಡಿಯುವುದಕ್ಕೆ ಆಗಲಿಲ್ಲ ಅಂತ ಹೇಳಿ ಗಲಾಟೆಯಾಯಿತು. ಸಾರ್, ಹೆಬ್ಬಾವುಗಳು ತಮಗೆ ಗೊತ್ತಲ್ಲ, ಆ ಎರಡು ಹೆಬ್ಬಾವುಗಳು ತಪ್ಪಿಸಿಕೊಂಡಿದ್ದವು. ಅದನ್ನು ಹಿಡಿಯುವುದಕ್ಕೆ ಆಗಲಿಲ್ಲ ಅಂತ ಹೇಳಿ ನಮ್ಮ ಮೇಟಿಯವರು ಹಿಂದೆ ಅರಣ್ಯ ಸಚಿವರಾಗಿದ್ದಾಗ ಹೇಳಿದ್ದರು. ಅದೇನಾದರೂ ಸಿಕ್ಕಿದೆಯಾ ಸ್ವಾಮಿ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಒಂದು ಸಿಕ್ಕಿದೆ. ಒಂದು ಮರ ಹತ್ತಿಬಿಟ್ಟಿತ್ತು.

ಉಪಾಧ್ಯಕ್ಷರು:- ಈಗ ಪ್ರತಾಪಚಂದ್ರ ಶೆಟ್ಟಿಯವರು.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ:- ವಾಟಾಳ್ ನಾಗರಾಜರನ್ನು ಮುಟ್ಟತಕ್ಕ ಧೈರ್ಯ ಹುಲಿ, ಚಿರತೆಗೆ ಇಲ್ಲ. ಅದರ ಬಗ್ಗೆ ಆತಂಕವೇ ಬೇಡ.

(ಒ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತದಿಂದ ರಾಷ್ಟ್ರೀಯ ಹೆದ್ದಾರಿಗೆ ಆಗಿರುವ ತೊಂದರೆ.

+ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತದಿಂದ ರಾಷ್ಟ್ರೀಯ ಹೆದ್ದಾರಿಗೆ ಸಮಾನಾಂತರವಾಗಿರತಕ್ಕ ಮೀನುಗಾರಿಕೆ ರಸ್ತೆ ಕೊಚ್ಚಿಹೋಗತಕ್ಕಂಥ ಭೀತಿ ಇದೆ. ಕುಂದಾಪುರ ತಾಲ್ಲೂಕಿನ ಗೋಪಾಡಿ ಬೀಜಾಡಿ, ಮತ್ತು ಕುಂದಾಪುರ ಪುರಸಭೆ ವ್ಯಾಪ್ತಿಯ ಯಂಕೋಡಿ, ಸುರತ್ಕಲ್ ಮತ್ತು ಕಾಪು ಕ್ಷೇತ್ರಗಳಲ್ಲಿ ಸಮುದ್ರ ಕೊರೆತ ಪ್ರಾರಂಭವಾಗಿದೆ. ಅದಕ್ಕೆ ತಕ್ಷಣ ಸರ್ಕಾರ ಮಧ್ಯ ಪ್ರವೇಶಿಸಿ ತಾತ್ಕಾಲಿಕ ತಡೆಗೋಡೆಯನ್ನು ನಿರ್ಮಿಸಲಿಕ್ಕೆ ಸಣ್ಣ ನೀರಾವರಿ ಸಚಿವರು ಪ್ರಯತ್ನ ಮಾಡಬೇಕು. ಏಕೆಂದರೆ ಎಲ್ಲಾ ಕೊಚ್ಚಿಹೋದ-ಮೇಲೆ ಮತ್ತೆ ತಾವು ಎಲ್ಲಾ ಇನ್‌ಸ್ಪೆಕ್ಷನ್ ಮಾಡಿ ತಾವು ಹೋಗಿ ತಡೆಗೋಡೆ ಕಟ್ಟುವುದರೊಳಗೆ ರಸ್ತೆ ಹೋಗುತ್ತದೆ; ಮನೆ ಹೋಗುತ್ತದೆ; ತೋಟ ಹೋಗುತ್ತದೆ; ಗದ್ದೆ ಹೋಗುತ್ತದೆ. ಈ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮುಂಚೆ ಜಿಲ್ಲಾಧಿಕಾರಿಯವರು ಸ್ಥಳ ಸಂದರ್ಶನ ಮಾಡಿ ಅವಶ್ಯಕತೆ ಇದ್ದಲ್ಲಿ ಅದನ್ನು ತಾತ್ಕಾಲಿಕ ತಡೆಗೋಡೆ ಕಟ್ಟತಕ್ಕಂಥ ಪ್ರಯತ್ನ ಮಾಡುತ್ತಿದ್ದರು. ಮೊನ್ನೆ ಇಂಥ ಪರಿಸ್ಥಿತಿ ಬಂದಾಗ ನಾನು ಜಿಲ್ಲಾಧಿಕಾರಿಯವರ ಕಛೇರಿಗೆ ಸಂಪರ್ಕ ಮಾಡಿದಾಗ ಸಣ್ಣ ನೀರಾವರಿ ಇಲಾಖೆ-ಯವರಿಗೆ ಹೇಳಬೇಕು ಎನ್ನತಕ್ಕ ಮಾತನ್ನು ಹೇಳಿದರು. ಬಹುಶಃ ಸಣ್ಣ ನೀರಾವರಿ ಅಧಿಕಾರಿಗಳು ಭೇಟಿ ಕೊಟ್ಟರು. ಆದರೆ ಅದರ ಬಗ್ಗೆ ಪರಿಹಾರ ಕೊಡತಕ್ಕ ಪ್ರಯತ್ನ ಮಾಡಲಿಲ್ಲ. ಬಹುಶಃ ಅವರಿಗೆ ಅಧಿಕಾರ ಇಲ್ಲದೇ ಇರಬಹುದು. ತಾವು ಸಹ ಹೋಗಬಹುದಿತ್ತು. ತಾವು ಸಹ ಹೋಗಲಿಲ್ಲ. ಆದ್ದರಿಂದ ಇದರ ಬಗ್ಗೆ ವಿಶೇಷವಾಗಿ ಗಮನ ಹರಿಸಿ ತಾತ್ಕಾಲಿಕ ತಡೆಗೋಡೆಯನ್ನು ನಿರ್ಮಿಸಿ ರಸ್ತೆಗಳು ಮನೆಗಳನ್ನು ಉಳಿಸತಕ್ಕ ಕೆಲಸ ಮಾಡಬೇಕು. ಮತ್ತು ಕೇಂದ್ರಸರ್ಕಾರದಿಂದ ಕೇರಳದಲ್ಲಿ ಏನು ಶಾಶ್ವತ ತಡೆಗೋಡೆಗೋಸ್ಕರ ಅನುದಾನವನ್ನು ಕೊಡುತ್ತಾ ಇದ್ದಾರೆ ಅದೇ ರೀತಿ ಇಲ್ಲೂ ಸಹ ಶಾಶ್ವತ ತಡೆ-ಗೋಡೆಯನ್ನು ಕಟ್ಟತಕ್ಕ ಪ್ರಯತ್ನವನ್ನು ಮಾಡಬೇಕು. ತಕ್ಷಣ ಈ ಸಮುದ್ರ ಕೊರೆತವನ್ನು ನಿಲ್ಲಿಸಲಿಕ್ಕೆ ತಮ್ಮ ವ್ಯಾಪ್ತಿಯಲ್ಲಿ ಏನು ಮಾಡುವುದಕ್ಕಾಗುತ್ತದೆ, ಏನು ಮಾಡುತ್ತೀರಿ ಎನ್ನತಕ್ಕ ಸ್ಪಷ್ಟ ಆಶ್ವಾಸನೆ-ಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ಜನರಿಗೆ ಕೊಡಬೇಕು ಎನ್ನತಕ್ಕ ಮಾತನ್ನು ಸನ್ಮಾನ್ಯ ಉಪಾಧ್ಯಕ್ಷರ ಮುಖಾಂತರ ಸನ್ಮಾನ್ಯ ಸಚಿವರ ಹತ್ತಿರ ಹೇಳುತ್ತೇನೆ.